ಮುಂದೆ ಪ್ರದರ್ಶಿಸುತ್ತಾನೆ; ಮುಂದೆ ಜರ್ಮನಿ ಮತ್ತು ಇಂಗ್ಲೆಂಡಿನ ಇಬ್ಬರು ತಂತ್ರಜ್ಞರು ಅದನ್ನು ಸುಧಾರಿಸುವರು. ಹಲವು ದೇಶದ ನೂರಾರು ತಂತ್ರಜ್ಞರು ಸೇರಿ ನಾಲ್ಕು ಶತಮಾನ ರೂಪಿಸಿದ ಶ್ರೀಸಾಮಾನ್ಯ ರಥವಿದು. ಮೊದಲಿಗೆ ಅದು ಮೂಗಾಲಿಯಿತ್ತು. ಬಳಿಕ ಇಗ್ಗಾಲಿಯಾಯಿತು. ಎಂತಲೇ ಅದಕ್ಕೆ ಬೈಸಿಕಲ್ ಎಂದು ನಾಮಕರಣವಾಯಿತು. ಮುಂದೆ ಬಗೆಬಗೆಯ ಸೈಕಲು ಸೃಷ್ಟಿಯಾದವು. ಸ್ಪೋರ್ಟ್ಸ್ ಸೈಕಲುಗಳಂತೂ ಹೇಳಬಾರದು. ಅವು ಬೆಟ್ಟಗಳ ಮೇಲೆ ಚಿರತೆಗಳಂತೆ ಧಾವಿಸುತ್ತವೆ. ಜಿಂಕೆಯಂತೆ ನೆಗೆಯುತ್ತವೆ. ಹಾವಿನಂತೆ ಹರಿಯುತ್ತವೆ. ವಿಶ್ವದ ಬಹುತೇಕ ಬ್ರಾಂಡುಗಳಲ್ಲಿ ರೆಕ್ಕೆಯ ಚಿಹ್ನೆಯಿದೆ. ಸ್ವಾತಂತ್ರ್ಯದ ಸಂಕೇತ!

ಶಾಲಾದಿನಗಳಲ್ಲಿ ಓದಿದ 'ಗೋಯಿಂಗ್ ಡೌನ್ ಹಿಲ್ ಆನ್ ಎ ಬೈಸಿಕಲ್' ಪದ್ಯ ನೆನಪಾಗುತ್ತಿದೆ. ಹುಡುಗನೊಬ್ಬನ ಸವಾರಿ ಅದರ ವಸ್ತು. ಜೀವನಪ್ರೀತಿಯಿಂದ ತುಂಬಿ ತುಳುಕುತ್ತಿರುವ ಆತ ಬೆಟ್ಟದಿಳಿಜಾರಲ್ಲಿ ಪೆಡಲುಗಳಿಂದ ಪಾದ ತೆಗೆದು ಗಾಳಿಯಲ್ಲಿ ರೆಕ್ಕೆಯಂತೆ ಬೀಸುವನು. ಎರಡೂ ಬದಿಯಿಂದ ತಂಗಾಳಿ ಹಾಯುತಿದೆ; ಪುಪ್ಪುಸಗಳಲಿ ತುಂಬಿಕೊಂಡ ಗಾಳಿ ನಗುವಾಗಿ ಹೊಮ್ಮುತಿದೆ; ಕಂಠದಿಂದ ಹಿಗ್ಗಿನಕೇಕೆ ಮೊಳಗಿದೆ. ಹುಡುಗ ಹಾರುವ ಹಕ್ಕಿಗೆ, 'ನೋಡಿಲ್ಲಿ, ನಿನ್ನಂತೆ ನಾನೂ ಹಾರುತ್ತಿರುವೆ' ಎಂದು ಕೀಟಲೆ ಮಾಡುವನು. ಬದುಕು ಸದಾ ಹೀಗೇ ಇರುತ್ತದೆ ಎಂದು ಭಾವಿಸುವನು. ಆದರೆ ಅಷ್ಟರಲ್ಲಿ ಇಳಿಜಾರು ಮುಗಿಯುತ್ತದೆ. ವೇಗ ತಗ್ಗುತ್ತದೆ. ಮುಂದೆ ಏರುಹಾದಿ ಮುಂದೆ ನಿಂತು ಸವಾಲು ಹಾಕುತ್ತದೆ. ಬಾಳಹಾದಿಯಲ್ಲಿ ಏರುಪೇರುಗಳೇ ಇರುವುದಿಲ್ಲವೆಂದು ತಿಳಿದಿದ್ದ ಆತನೀಗ ಅಳುಕಿ ನಿಲ್ಲುವನು. ರೆಕ್ಕೆ ಬರುವ ತನಕ ಕಾಯಲು ನಿರ್ಧರಿಸುವನು. ನರಮನುಷ್ಯರಿಗೆ ರೆಕ್ಕೆಯೆಂತು ಬಂದೀತು? ಸೈಕಲ್ ತುಳಿದೇ ಅಥವಾ ಕಷ್ಟಗಳನ್ನು ಹಲ್ಲುಕಚ್ಚಿ ಎದುರಿಸಿಯೇ ಅವನ್ನು ಪಡೆದುಕೊಳ್ಳಬೇಕು. ಹುಟ್ಟುರೆಕ್ಕೆಗಳಲ್ಲಿ ಹಾರುವ ಹಕ್ಕಿಗಿಂತ ಕಷ್ಟದ ಸಾಧನೆಯಿದು. ಆದರೆ ಲೋಕದಲ್ಲಿ ಎಷ್ಟೆಲ್ಲ ಜನ ಸೆಣಸಾಡಿ ರೆಕ್ಕೆಹುಟ್ಟಿಸಿಕೊಂಡಿದ್ದಾರೆ. ನೀಲಗಗನವನ್ನೇ ಗುರಿಯಾಗಿಸಿ ಹಾರಿದ್ದಾರೆ.

ಭಾರತದಲ್ಲಿ ಖ್ಯಾತವಾಗಿರುವ ಸೈಕಲ್ಲು ಬ್ರಾಂಡುಗಳು ಅಟ್ಲಾಸ್–ಹರ್ಕ್ಯುಲಿಸ್ ಎಂಬ ಇಬ್ಬರು ಗ್ರೀಕ್ ವೀರರ ಹೆಸರಲ್ಲಿವೆ. ಈ ವೀರರೂ ಕಲ್ಪನಾವಿಲಾಸಿಗಳು. ತುಂಟರು. ಹೆಗಲಮೇಲೆ ಭೂಮಿ ಹೊತ್ತು ಭಾರದಿಂದ ತಿಣುಕುತ್ತಿರುವ ಅಟ್ಲಾಸನ ಚಿತ್ರವಂತೂ ನನ್ನ ಮನಃಪಟಲದಲ್ಲಿ ಅಚ್ಚೊತ್ತಿದೆ. ವಾಸ್ತವವಾಗಿ ಅದು ಧರೆಯಲ್ಲ. ಗಗನ. ದೇವ–ದಾನವ ಕಾಳಗದಲ್ಲಿ ನಮ್ಮ ವಿರುದ್ಧ ನಿಂತನೆಂದು ದೇವತೆಗಳು ಅವನಿಗೆ ವಿಧಿಸಿದ ಶಿಕ್ಷೆಯದು. ಅಟ್ಲಾಸನು ತಪ್ಪಾಯಿತೆಂದು ದುಃಖ ತೋಡಿಕೊಂಡಾಗ, ಭಾರ ಹೊರುವ ಮತ್ತೊಬ್ಬ ಶೂರ ಸಿಕ್ಕರೆ ವರ್ಗಾಯಿಸಿ ಬಿಡುಗಡೆ ಪಡೆಯಬಹುದು ಎಂದು ಉಪಶಾಪ ಸಿಗುತ್ತದೆ. ಅಟ್ಲಾಸನು ಭಾರ ದಾಟಿಸಲು ತಕ್ಕ ವ್ಯಕ್ತಿಯನ್ನು ಹುಡುಕುತ್ತ ಹೋಗುವಾಗ ಸಿಗುವವನೇ ಹರ್ಕ್ಯುಲಿಸ್. ಹರ್ಕ್ಯುಲಿಸ್ ಕರುಣೆಯಿಂದ ಕೊಂಚಹೊತ್ತು ಗಗನ ಹೊರಲು ಒಪ್ಪುತ್ತಾನೆ. ಆದರೆ ಅಟ್ಲಾಸ್ ಕೈಕೊಡಬಹುದು ಎಂದು ಶಂಕೆ ಬಂದು, ಹೆಗಲವಸ್ತ್ರ ಸರಿಪಡಿಸಿಕೊಳ್ಳುವ ನೆಪದಲ್ಲಿ ಅದನ್ನು ಮತ್ತೆ ಅಟ್ಲಾಸನಿಗೆ ದಾಟಿಸಿ ಓಡಿಹೋಗುತ್ತಾನೆ. ಸಾಹಸ ಚಾತುರ್ಯಗಳಿಗೆ ಹೆಸರಾದ ಗ್ರೀಕ್‌ವೀರರ ಹೆಸರಲ್ಲಿರುವ ಈ ವಾಹನವನ್ನು ಭಾರತೀಯರು ಕತ್ತೆದುಡಿತಕ್ಕೆ ಹಚ್ಚಿಬಿಟ್ಟರು. ನಮ್ಮ ಹಂಪಿ ಸೀಮೆಯಲ್ಲಿ ಎಳೆನೀರಿನವರು ಸೈಕಲ್ಲಿನ ಅಂಗಾಗಗಳನ್ನೆಲ್ಲ ಕಳೆದು ಅದರ ಮೇಲೆ ಹತ್ತಾರು ಗೊನೆ ಹೇರಿಕೊಂಡು ಬರುವುದುಂಟು; ಉತ್ತರ ಭಾರತದಲ್ಲಿ ಸೈಕಲ್‌ರಿಕ್ಷಾಗಳು ಇರುವೆಯಂತೆ ಹರಿದಾಡುವುದುಂಟು. ಇದನ್ನೆಲ್ಲ ನೋಡುವಾಗ 'ಜನ ಸೈಕಲನ್ನು